ತುಮಕೂರು ಜಿಲ್ಲೆಯ ಗ್ರಾಮಲೆಕ್ಕಿಗರ ವಸತಿಗೃಹ ನಿರ್ಮಾಣ

1784 (2395) ಶ್ರೀ ಲಕ್ಷ್ಮಿ ನಾರಾಯಣ (ಅಣ್ಣಯ್ಯ) (ತುರುವೇಕೆರೆ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿರುವ ಗ್ರಾಮಲೆಕ್ಕಿಗರ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ಕೊಡುವುದು)

ಆ) ಈ ಗ್ರಾಮಲೆಕ್ಕಿಗರು ಕೇಂದ್ರ ಸ್ಥಾನದಲ್ಲಿಯೇ ವಾಸಿಸಲು ಸರ್ಕಾರ ವಸತಿ ಸೌಕರ್ಯವನ್ನು ಒದಗಿಸಲಾಗಿದೆಯೇ; ಕಂದಾಯ ಇಲಾಖೆಯಿಂದ ನಿರ್ಮಿಸಿರುವ ಕಟ್ಟಡಗಳೆಷ್ಟು;

ಇ) ತುರುವೇಕೆರೆ ತಾಲ್ಲೂಕಿನಲ್ಲಿ ಸ್ವಂತ ಕಟ್ಟಡಗಳು ಇರುವ ಗ್ರಾಮಗಳಾವುವು?

ಈ) ಕಳೆದ ಮೂರು ವರ್ಷದಿಂದ ತುರುವೇಕೆರೆ ತಾಲ್ಲೂಕಿನಲ್ಲಿ ಇಲಾಖೆಯಿಂದ ಕಟ್ಟಿದ ಕಟ್ಟಡಗಳೆಷ್ಟು; ಇನ್ನೂ ಕಟ್ಟಬೇಕಾಗಿರುವುದೆಷ್ಟು; ಯಾವಾಗ ನಿರ್ಮಿಸಲಾಗುವುದು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು)

ಅ) ತುಮಕೂರು ಜಿಲ್ಲೆಯಲ್ಲಿ 540 ಗ್ರಾಮಲೆಕ್ಕಿಗರುಗಳು ಇರುತ್ತಾರೆ. (ತುಮಕೂರು72, ಗುಬ್ಬಿ58, ಕುಣಿಗಲ್69, ತಿಪಟೂರು50, ತುರುವೇಕೆರೆ51, ಚಿಕ್ಕನಾಯಕನಹಳ್ಳಿ-42, ಮಧುಗಿರಿ 63 ಸಿರಾ66, ಕೊರಟಗೆರೆ33 ಮತ್ತು ಪಾವಗಡ-56

ಆ) ಹಂತಹಂತವಾಗಿ ವಸತಿ ಗೃಹಗಳ ನಿರ್ಮಾಣಕ್ಕಾಗಿ ಆಯವ್ಯಯದಲ್ಲಿ ಅನುದಾನ ಒದಗಿಸಲಾಗುತ್ತಿದೆ. ಈವರೆವಿಗೆ ಒಟ್ಟು 258 ಗೃಹಗಳನ್ನು ನಿರ್ಮಿಸಲಾಗಿದೆ.

ಇ) ಕೊಡಗೀಹಳ್ಳಿ 2) ಬಾಣಸಂದ್ರ 3) ಅರಳೀಕೆರೆ 4) ಡಬ್ಬೇಘಟ್ಟ 5) ಬೆನಕನಕೆರೆ 6) ಸಾಲರಹಳ್ಳಿ 7) ಗೋಣಿತುಮಕೂರು 8) ಜಿಗಣೇನಹಳ್ಳಿ 9) ಅರೆಮಲ್ಲೇನಹಳ್ಳಿ 10) ದಂಡಿನಶಿವರ 11) ಹುಲ್ಲೇಕೆರೆ 12) ಸಂಪಿಗೆ 13) ಸಂಪಿಗೆ ಹೊಸಹಳ್ಳಿ 14) ಕೊಂಡಜ್ಜಿ 15) ಮಾಸ್ತಿಗೊಂಡನಹಳ್ಳಿ 16) ದೊಡ್ಡಕಟ್ಟಿತೆರೆ 17) ಮುಗಳೂರು 18) ತುಯ್ಯಲಹಳ್ಳಿ 19) ಅಜ್ಜನಹಳ್ಳಿ 20) ವಿಠಲಾಪುರ 21) ಬೈತರಹೊಸಹಳ್ಳಿ

ಈ) ಇಲಾಖೆಯಿಂದ ವಸತಿ ಗೃಹಗಳಿಗಾಗಿ ಯಾವುದೇ ಕಟ್ಟಡಗಳನ್ನು ಕಳೆದ ಮೂರು ವರ್ಷಗಳಿಂದ ನಿರ್ಮಿಸಿರುವುದಿಲ್ಲ. ಆಯವ್ಯಯದಲ್ಲಿ ಅನುದಾನದ ಲಭ್ಯತೆಗೆ ಅನುಗುಣವಾಗಿ ನಿರ್ಮಿಸಬೇಕಾಗಿರುವ ವಸತಿಗೃಹಗಳ ಸಂಖ್ಯೆಯನ್ನು ನಿರ್ಧರಿಸಲಾಗುವುದು.

ತುರುವೇಕೆರೆ ತಾಲ್ಲೂಕಿಗೆ ಸಿ.ಆರ್.ಎಫ್. ರಸ್ತೆಗಳು

1785 (2396) ಶ್ರೀ ಲಕ್ಷ್ಮಿ ನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನ ಪರಹಸಂದ್ರ ತುರುವೇಕೆರೆ, ನೊಣವಿನಕೆರೆ-ಹಿರೇಶಾವೆ, ಯಡಿಯೂರು-ಕಲ್ಲೂರು ಈ ರಸ್ತೆಗಳ ಕಾಮಗಾರಿಗೆ ಸಿ.ಆರ್.ಎಫ್ ನಿಂದ ಹಣ ಮಂಜೂರಾಗಿದೆಯೇ;

ಆ) ಹಾಗಿದ್ದಲ್ಲಿ, ಟೆಂಡರ್ ಕರೆಯಲಾಗಿದೆಯೇ; ಕರೆದಿದ್ದರೆ ಯಾವ ಸಂಸ್ಥೆಗೆ ಗುತ್ತಿಗೆ ನೀಡಲಾಗಿದೆ;

ಇ) ಕೆಲಸ ಯಾವಾಗ ಪ್ರಾರಂಭ ಮಾಡಿ ಮುಗಿಸಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು)

ಅ) ಮಂಜೂರಾಗಿದೆ.

ಆ) ಟೆಂಡರ್ ಕರೆದು ಗುತ್ತಿಗೆದಾರರನ್ನು ನೇಮಿಸಲಾಗಿದೆ.

1. ವರಹಸಂದ್ರ-ತುರುವೇಕೆರೆ ರಸ್ತೆ
2. ನೊಣವಿನಕೆರೆ-ಹಿರೇಶಾವೆ ರಸ್ತೆ
3. ಯಡಿಯೂರು-ಕಲ್ಲೂರು ರಸ್ತೆ

ಮೂರು ಕಾಮಗಾರಿಗಳನ್ನು ಶ್ರೀ ಹೆಚ್.ಎನ್. ರಾಮೇಗೌಡ, ಒಂದನೇ ದರ್ಜೆ ಗುತ್ತಿಗೆದಾರರು, ಸೌಂದಳ್ಳಿ ಪೋಸ್ಟ್ ಚನ್ನರಾಯಪಟ್ಟಣ ತಾ: ಹಾಸನ ಜಿಲ್ಲೆ ಇವರಿಗೆ ವಹಿಸಿಕೊಡಲಾಗಿದೆ.

ಕಾಮಗಾರಿ ಹೆಸರು	ಪ್ರಾರಂಭಿಸುವ ದಿನಾಂಕ	ಮುಗಿಸುವ ದಿನಾಂಕ
ವರಹಸಂದ್ರ ತುರುವೇಕೆರೆ	ಮಾರ್ಚ್	ಮೇ 2003 2003
ನೊಣವಿನಕೆರೆ ಹಿರೇಶಾವೆ ರಸ್ತೆ	ಮಾರ್ಚ್ 2003	ಮೇ 2003
ಯಡಿಯೂರು ಕಲ್ಲೂರು ರಸ್ತೆ	ಮಾರ್ಚ್ 2003	ಮೇ 2003 ಮೇ 2003

ತುರುವೇಕೆರೆ ತಾಲ್ಲೂಕು ನೊಣವಿನಕೆರೆ ಹಿರೀಸಾವೆ ರಸ್ತೆಯ ಅಡ್ಡವಾಗಿರುವ ಹುಣಸೇಮರ

1786 (2397) ಶ್ರೀ ಲಕ್ಷ್ಮಿ ನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕು ನೊಣವಿನಕೆರೆ ಹಿರೀಸಾವೆ ರಸ್ತೆಯ ಮಧ್ಯೆಯಿರುವ ಹುಣಸೇಮರ ಸಂಚಾರಕ್ಕೆ ಅಡ್ಡಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಬಂದಿದ್ದಲ್ಲಿ ಸುಮಾರು ವರ್ಷಗಳಿಂದ ಈ ಮರದಿಂದ ಆಗುತ್ತಿರುವ ಅನಾಹುತ ತಿಳಿದಿದ್ದರು ಈ ಮರವನ್ನು ತೆಗೆಯದಿರಲು ಕಾರಣವೇನು:

ಇ) ಈಗಾಗಲೇ ರಾಷ್ಟ್ರೀಯ ರಾಜ್ಯ ಹಾಗೂ ಎಂ.ಡಿ.ಆರ್. ರಸ್ತೆಗಳಲ್ಲಿರುವ ಸಾವಿರಾರು ಚರಗಳನ್ನು ಕಡಿದು ಸಂಚಾರಕ್ಕೆ ಅನುಕೂಲ ಮಾಡಿಕೊಟ್ಟಿರುವಾಗ ಈ ಮರವನ್ನು ತೆಗೆಯದಿರಲು ಕಾರಣವೇನು: ಯಾವಾಗ ತೆಗೆಸಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು)

ಅ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಹೀಗೆ ರಸ್ತೆಯಲ್ಲಿರುವ ಚರವನ್ನು ತೆಗೆಯುವಲ್ಲಿ ಅರಣ್ಯ ಇಲಾಖೆಯ ವತಿಯಿಂದ ಕ್ರಮ ಕೈಗೊಳ್ಳಬೇಕಿದೆ.

ಇ) ಜಿಲ್ಲಾ ಅರಣ್ಯ ಅಧಿಕಾರಿಗಳೊಂದಿಗೆ ಕಾರ್ಯಪಾಲಕ ಇಂಜಿನಿಯರ್‌ರವರು ವ್ಯವಹರಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.